ದಿನಾಂಕಃ **14.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎ ಎಂ ಆರ್ ವಕೀಲರಿಂದಃ-</u>

ನಾನು ಬಾಳೆ ಮಂಡಿ ವ್ಯಾಪಾರ ಮಾಡುತ್ತೇನೆ. ನನ್ನ ತಂದೆಗೆ 3 ಜನ ಮಕ್ಕಳು, ಅವರುಗಳೆಂದರೆ ಮಲ್ಲೇದೇವರು, ಈಶ್ವರಪ್ಪ ಮತ್ತು ನಾನು. ಈ ದಾವೆಯನ್ನು ಪ್ರತಿವಾದಿಯು ಒತ್ತುವರಿ ಮಾಡಿರುವ ಬಗ್ಗೆ ಹಾಕಿರುತ್ತೇನೆ. ನಮ್ಮ ಸಹೋದರರ ನಡುವೆ ವಿಭಾಗವಾಗಿ ಅವರಿಗೆ ಬಂದ ಹಿಸ್ಸೆಯಂತೆ ಸ್ವಾದೀನ ಹೊಂದಿ ಅನುಭವಿಸುತ್ತಿರುತ್ತೇವೆ ಎಂದರೆ ಸರಿ. ಎಷ್ಟು ಒತ್ತುವರಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟು 53 ಅಡಿ ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ದಾವೆಯಲ್ಲಿ 5 ಅಡಿ ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ.

ದಾವಾ ಆಸ್ತಿ ಮನೆ ಎಂದರೆ ಸರಿ. ಅದರ ವಿಸ್ತೀರ್ಣ 53 x 44 ಎಂದರೆ ಸಾಕ್ಷಿ 53 x 45 ಎಂದು ನುಡಿಯುತ್ತಾರೆ. ಆ ಆಸ್ತಿಯಲ್ಲಿ ನನಗೆ 53 x 11 ಅಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. 53 x 11 ಅಸ್ತಿ ಯಲ್ಲಿ ಪೂರ್ವ ಪಶ್ಚಿಮ 5 ಅಡಿ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ನನ್ನ ವಾದ ಪತ್ರದ ಬಿ ಷೆಡ್ಯೂಲ್ ನಲ್ಲಿ ಹೇಳಿರುತ್ತೇನೆ ಎಂದರೆ ಸರಿ. 11 ಅಡಿ ಆಸ್ತಿಯಲ್ಲಿ 5 ಅಡಿ ಒತ್ತುವರಿ ಮಾಡಿದ ಪಕ್ಷದಲ್ಲಿ ನಾನು ಈಗ 6 ಅಡಿ ವಿಸ್ತೀರ್ಣದಲ್ಲಿ ಮಾತ್ರ ಸ್ವಾದೀನ ಹೊಂದಿರಬಹುದು ಎಂದರೆ ಸರಿ. ವಿಭಾಗದಲ್ಲಿ ಪ್ರತಿವಾದಿಗೆ 53 x 24 ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿ 53 x 23 ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ನಿಪಿ-4 ಮತ್ತು 5 ರಲ್ಲಿ 53 x 11 ರ ಆಸ್ತಿಯ ಬಗ್ಗೆ ನಮೂದು ಇಲ್ಲಾ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ 53 x 10 ಎಂದು ನಮೂದು ಇದೆ ಎಂದರೆ ಸರಿಯಲ್ಲ. ವಿಭಾಗದಲ್ಲಿ ನನಗೆ ಕಡಿಮೆ ವಿಸ್ತೀರ್ಣದ ಮನೆ ನೀಡಿದ್ದರಿಂದ ಅಸಸ್ಮೆಂಟ್ ಸಂಖ್ಯೆ 33 ರಲ್ಲಿ 46 x 29 ಅಳತೆಯ ನಿವೇಶನ ನೀಡಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ಸಹೋದರ ಈಶ್ವರಪ್ಪನವರಿಗೂ ಕಡಿಮೆ ವಿಸ್ತೀರ್ಣದ ಮನೆ ನೀಡಿದ್ದರಿಂದ ಹೆಚ್ಚುವರಿಯಾಗಿ ಒಂದೂವರೆ ಎಕರೆ ಜಮೀನು ನೀಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಯನ್ನು ಅಳತೆ ಮಾಡಿಸಲು ನನ್ನದು ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ.

ನಾನು ಈ ಹಿಂದೆ ಗ್ರಾಮ ಪಂಚಾಯ್ತಿಗೆ ಅಳತೆ ಮಾಡಲು ಅರ್ಜಿ ನೀಡಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ಅಳತೆ ಮಾಡಲು ಬಿಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ನೀಡಿದ ಅರ್ಜಿಯಂತೆ ಪಿ ಡಿ ಓ ರವರು ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ಅಳತೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಒತ್ತುವರಿ ಮಾಡಿರುತ್ತಾರೆ ಎಂದು ನಿಪಿ-3 ರಂತೆ ಪೋಲಿಸರಿಗೆ ದೂರು ನೀಡಿರುತ್ತೇನೆ ಎಂದರೆ ಸರಿ. ನಿಪಿ-3 ದಾವಾ ಆಸ್ತಿಗೆ ಸಂಬಂಧಿಸಿದ ದೂರು ಅಲ್ಲ ಎಂದರೆ ಸರಿಯಲ್ಲ. ನಿಪಿ-6 ರಿಂದ 8 ರ ಛಾಯಾಚಿತ್ರಗಳು ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯ ಛಾಯಾಚಿತ್ರಗಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯನ್ನು ಒತ್ತುವರಿ ಮಾಡದಿದ್ದರೂ ಸಹ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಆತನಿಗೆ ಸೇರಿದ ಆಸ್ತಿಯಲ್ಲಿ ಗೋಡೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಜಾಗದಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನ್ಯಾಯಾಲಯದ ನಿಯೋಗಿಯ ಮೂಲಕ ಅಳತೆ ಮಾಡಿಸಲು ನನ್ನದು ಯಾವುದೇ ತೊಂದರೆ ಇಲ್ಲಾ. ಪ್ರತಿವಾದಿಗೆ 53 x 24 ರಂತೆ ಇ ಸ್ವತ್ತು ನೀಡಿರುತ್ತಾರೆ ಎಂದರೆ ಸಾಕ್ಷಿ ವಿಭಾಗದಂತೆ 53 x 23 ಅಡಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ವಿಭಾಗದಂತೆ 53 x 10 ಅಡಿ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿ 53 x 11 ಅಡಿ ಆಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.